ಓಸ್. ನಂ.162/2021
ಪಿಡಬ್ಲ್ಯು :1

ಸಾಕ್ಷಿಗೆ ಇಂದು ದಿನಾಂಕ 17/06/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು : ಶ್ರೀ.ಎನ್ ವಿ.ಡಿ ವಕೀಲರಿಂದ ಪ್ರತಿ ವಾದಿಗಳ ಪರವಾಗಿ

1. ನನ್ನ ಗಂಡ ದಿ: 8-9-2000 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ. ನನಗೆ ಅರವಿಂದ ಒಬ್ಬನೇ ಗಂಡು ಮಗ ಇರುತ್ತಾನೆ. ವಾದಿ ನಂ. 2 ರಿಂದ 4 ರವರು ನಮ್ಮ ಹೆಣ್ಣು ಮಕ್ಕಳು ಎಂದರೆ ಸರಿ. ವಾದಿ ನಂ.2 ರವರ ಮದುವೆ 1984 ರಲ್ಲಿ ಆಗಿರುತ್ತದೆ. ವಾದಿ ನಂ. 2 ರವರ ಮದುವೆಯಾದ 4-5 ವರ್ಷಗಳ ನಂತರ ವಾದಿ ನಂ. 4 ರವರ ಮದುವೆಯಾಗಿರುತ್ತದೆ. ವಾದಿ ನಂ. 4 ರವರ ಮದುವೆಯಾದ 2 ವರ್ಷಗಳ ನಂತರ ವಾದಿ ನಂ. 3 ರವರ ಮದುವೆಯಾಗಿರುತ್ತದೆ. ವಾದಿ ನಂ. 2 ರವರನ್ನು ಸೋಲಾಪೂರನಲ್ಲಿ ಮದುವೆ ಮಾಡಿಕೊಟ್ಟಿರುತ್ತೇವೆ. ವಾದಿ ನಂ. 3 ರವರನ್ನು ನಿಡಗುಂದಿನಲ್ಲಿ ಮದುವೆಮಾಡಿಕೊಟ್ಟಿರುತ್ತೇವೆ. ವಾದಿ ನಂ. 4 ರವರನ್ನು ಇಚಲಕರಂಜಿ ಊರಿನಲ್ಲಿ ಮದುವೆಮಾಡಿಕೊಟ್ಟಿರುತ್ತೇವೆ.

2. ದಾವಾ ಆಸ್ತಿ ಸರ್ವೆ ನಂ. 142/2 ರ 14 ಎಕರೆ ಜಮೀನು ಮೂಲತ:ವಾಗಿ ನನ್ನ ಗಂಡ ನೀಲಕಂಠರವರಿಗೆ ವಾಟ್ನಿಯಲ್ಲಿ ಬಂದಿರುತ್ತದೆ ಎಂದರೆ ಸರಿ. 1983 ರಲ್ಲಿ ಸದರಿ ದಾವಾ ಆಸ್ತಿ ವಾಟ್ನಿಯಾಗಿ 'ಡ' ನಂ. 4676 ಎಂದು ವರದಿ ಇರುತ್ತದೆ ಎಂದರೆ ಸರಿ. ವಾಟ್ನಿಯಾದಾಗಿನಿಂದ ಸರ್ವೆ ನಂ. 142/2 ರ 14 ಎಕರೆ ಜಮೀನನ್ನು ನನ್ನ ಗಂಡ ನೀಲಕಂಠರವರೇ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ದಿ: 23-11-1995 ರಂದು ನನ್ನ ಗಂಡ ನೀಲಕಂಠ ರವರು ದಾವಾ ಜಮೀನನ್ನು ತಮ್ಮ ಮಗ ಅರವಿಂದರವರಿಗೆ ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ಆ ಪ್ರಕಾರ 'ಡ' ನಂ. 4922 ಎಂದು ಮಂಜೂರು ಆಗಿರುತ್ತದೆ ಎಂದರೆ ಸರಿ. ಸದರಿ ವರದಿಯ ಪ್ರಕಾರ ಅರವಿಂದರವರ ಹೆಸರು

ಪಹಣಿ ಪತ್ರಿಕೆಯಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ. ದಾವಾ ಜಮೀನನ್ನು ನನ್ನ ಗಂಡ ತಮ್ಮ ಮಕ್ಕಳಿಗೆ ಬಿಟ್ಟುಕೊಟ್ಟ ವಿಷಯ ನನಗೆ ಗೊತ್ತಿರುವುದಿಲ್ಲ. ನನಗೆ ನನ್ನ ಗಂಡ ತನ್ನ ಮಕ್ಕಳಿಗೆ ಆಸ್ತಿ ಬಿಟ್ಟುಕೊಟ್ಟ ಬಗ್ಗೆ 'ಡ' ನಂಬರ ಮಂಜೂರು ಆದ ನಂತರ 6-7 ತಿಂಗಳ ನಂತರ ಗೊತ್ತಾಗಿರುತ್ತದೆ. 'ಡ' ನಂಬರ ನಂ. 4922 ನ್ನು ಪ್ರಶ್ನಿಸಿ ಯಾವುದೇ ಆಕ್ಷೇಪಣೆ ಮತ್ತು ಅಪೀಲನ್ನು ನಾವು ಮಾಡಿರುವುದಿಲ್ಲ.

3. ನನ್ನ ಗಂಡ ನೀಲಕಂಠರವರು ದಿ: 23-11-1995 ರಂದು ವಾಟ್ನಿ ಪತ್ರ ಮಾಡಿಕೊಡುವುದರ ಮೂಲಕ ಹಕ್ಕುಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. 'ಯು" ಫಾರ್ಮನಲ್ಲಿ ನಾನು ಸಹಿ ಮಾಡಿರುತ್ತೇನೆ. ನನ್ನ ಮಗ 2021 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾನೆ. ದಾವಾ ಆಸ್ತಿಯನ್ನು ನನ್ನ ಮಗನೇ ಸಾಗುವಳಿ ಮಾಡುತ್ತಿದ್ದ ಎಂದರೆ ಸರಿ. ನನ್ನ ಗಂಡ 1995 ರಲ್ಲಿ ದಾವಾ ಆಸ್ತಿಯನ್ನು ನನ್ನ ಸಮಕ್ಷಮದಲ್ಲಿ ಹಕ್ಕು ಬಿಟ್ಟುಕೊಟ್ಟಿದ್ದು ಸದರಿ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ವಾದಿ ನಂ. 2 ರಿಂದ 4 ರವರಿಗೆ ದಾವಾ ಆಸ್ತಿಯ ಹಕ್ಕುಬಿಟ್ಟುಕೊಟ್ಟ ವಿಷಯ ಬಹಳ ದಿನಕ್ಕೆ ಗೊತ್ತಾಗಿರುತ್ತದೆ. ಅವರಿಗೆ ಯಾವಾಗ ಗೊತ್ತಾಗಿರುತ್ತದೆ ಎಂದು ನನಗೆ ನೆನಪಿಲ್ಲ. ದಾವಾ ಆಸ್ತಿಯನ್ನು ಹಕ್ಕುಬಿಟ್ಟುಕೊಟ್ಟ ಬಗ್ಗೆ ನನಗೆ ಮತ್ತು ಉಳಿದ ವಾದಿಯರಿಗೆ ಗೊತ್ತಿದ್ದರೂ ಸಹ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯನ್ನು ನನ್ನ ಗಂಡ ಜೀವಂತ ಇದ್ದಾಗ ಅರವಿಂದರವರಿಗೆ ಮತ್ತು ಇತರ ಮಕ್ಕಳಿಗೆ ಬಿಟ್ಟುಕೊಟ್ಟ ಕಾರಣ ದಾವಾ ಆಸ್ತಿಯಲ್ಲಿ ನನಗೆ ಮತ್ತು ವಾದಿ ನಂ. 2 ರಿಂದ 4 ರವರಿಗೆ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ನಂ. 2 ರಿಂದ 4 ರವರು 1984 ರಲ್ಲಿ ಮದುವೆಯಾಗಿ ಹೋಗಿರುವುದರಿಂದ ಅವರು ಅವಿಭಕ್ತ ಕುಟುಂಬದ ಸದಸ್ಯರು ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಮತ್ತು ಅವಿಭಕ್ತ ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಜೀವಂತ ಇದ್ದಾಗ

ಅರವಿಂದವರಿಗೆ ಹಕ್ಕುಬಿಟ್ಟಕಾರಣ ಅದು ಅರವಿಂದರವರ ಸ್ವಯಾರ್ಜಿತ ಆಸ್ತಿಯಾಗುತ್ತದೆ ಎಂದರೆ ಸರಿಯಲ್ಲ. ಅರವಿಂದರವರು ತೀರಿಕೊಂಡ ನಂತರ ಅವರ ಕಾನೂನುಬದ್ದ ವಾರಸುದಾರರಾಗಿ ಪ್ರತಿವಾದಿ ನಂ. 1 ರಿಂದ 4 ರವರು ದಾವಾ ಆಸ್ತಿಯನ್ನು ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪಾಲು ಕೇಳಲು ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

5. ಮೃತ ಅರವಿಂದರವರು ವಿಜಯಪುರದ ಡಿಡಿಪಿಐ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಮೃತ ಅರವಿಂದರವರು ರೂ. 10 ಲಕ್ಷ ಎಲ್ ಐ ಸಿ ಪಾಲಸಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಎಲ್ ಐ ಸಿ ಪಾಲಸಿಯ 8 ವರೆ ಲಕ್ಷ ರೂಪಾಯಿಗಳನ್ನು ಪಡೆದುಕೊಂಡಿರುತ್ತೇವೆ. ಎಲ್ ಐ ಸಿ ಪಾಲಿಸಿಗೆ ನಾನೇ ನಾಮಿನಿ ಇರುತ್ತೇನೆ. ಎಲ್ ಐ ಸಿ ಪಾಲಿಸಿಯ ಹಣ ನನ್ನ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಸರಿ. ಸದರಿ ಎಲ್ ಐ ಸಿ ಹಣವನ್ನು ನಾನೇ ಸ್ವಂತಕ್ಕೆ ಬಳಸಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಎಲ್ ಐ ಸಿ ಹಣವನ್ನು ಅರವಿಂದರವರ ಹೆಂಡತಿ ಮಕ್ಕಳಿಗೆ ನೀಡಿರುವುದಿಲ್ಲ ಎಂದರೆ ಸರಿ. ಅದರಲ್ಲಿ ಪ್ರತಿವಾದಿ ನಂ. 1 ರಿಂದ 4 ರವರು ಪಾಲುದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಎಲ್ ಐ ಸಿ ಪಾಲಸಿಯ ಹಣವನ್ನು ಪಡೆದುಕೊಳ್ಳುವಾಗ ಪ್ರತಿವಾದಿ ನಂ. 1 ರಿಂದ 4 ರವರಿಗೆ ತಿಳಿಸಿರುವುದಿಲ್ಲ. ಅದಕ್ಕೂ ಅವರು ವಾರಸುದಾರರು ಇರುವುದರಿಂದ ಅವರಿಗೆ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಮತ್ತು ವಾದಿ ನಂ. 2 ರಿಂದ 4 ರವರಿಗೆ ಯಾವುದೇ ರೀತಿ ಪಾಲು, ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 1 ರಿಂದ 4 ರವರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿನ ಎಲ್ಲಾ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಮಗ ಅರವಿಂದರವರು ತೀರಿಕೊಂಡ ನಂತರ ಪ್ರತಿವಾದಿ ನಂ. 1 ರಿಂದ 4 ರವರೇ ದಾವಾ ಜಮೀನಿನ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿ ನಂ. 2

ರಿಂದ 4 ರವರು ವಾರಸುದಾರರಾಗುವುದಿಲ್ಲ ಎಂದರೆ ಸರಿಯಲ್ಲ. ವಾದಿ ನಂ. 2 ಮತ್ತು 4 ರವರು ಸಪಾಲುದಾರರು ಆಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.